ಸಮಯವಿದೆ. ಏಕೆಂದರೆ, ಅದೆಲ್ಲ ಆಗಬೇಕಾದರೆ ನಾನು ಅಲ್ಲಿಗೆ ಹೋಗಬೇಕಲ್ಲವೇ? ನೀನು ಅಷ್ಟರ ಒಳಗೆ ನಾನು ಹೇಳಿದ ಒಂದು ಕೆಲಸ ಮಾಡಿದ್ದೇ ಆದರೆ ನಾನು ನಿನಗೆ ನಾಲ್ಕು ತಾಮ್ರದ ನಾಣ್ಯಗಳನ್ನು ಕೊಡುತ್ತೇನೆ. ಅದರಿಂದ ನಿನಗೆ ಬೇಕಾದ್ದನ್ನು ನೀನು ಕೊಂಡುಕೊಳ್ಳಬಹುದು. ನೀನು ಮಾಡಬೇಕಾಗಿರುವುದಿಷ್ಟೇ, ನಾನು ವಾಸವಾಗಿರುವ ಮನೆಗೆ ಹೋಗಿ ನಾನು ಅಲ್ಲಿ ಬಿಟ್ಟು ಬಂದಿರುವ ಮೂರು ಮಾಯಾಪೆಟ್ಟಿಗೆಗಳನ್ನು ತಂದು ಕೊಡು ಸಾಕು' ಎನ್ನುತ್ತಾನೆ. ಚಮ್ಮಾರರ ಹುಡುಗ ಸೈನಿಕನಿಗೆ ಅವನು ಹೇಳಿದಂತೆ ಅವನ ಮನೆಯಿಂದ ಆ ಮೂರು ಮಾಯಾಪೆಟ್ಟಿಗೆಯನ್ನು ತಂದು ಒಪ್ಪಿಸಿದ. ಇತ್ತ ಕಡೆ ಊರ ಹೊರಗಡೆ ಒಂದು ಎತ್ತರವಾದ ವಿಶಾಲ ವೇದಿಕೆ ಸಿದ್ಧವಾಗಿತ್ತು. ಅದರ ಸುತ್ತಲೂ ರಾಜಭಟರು ಶಸ್ತ್ರಧಾರಿಗಳಾಗಿ ನಿಂತಿದ್ದರು. ಸಾವಿರಾರು ಜನರು ಸೈನಿಕನಿಗೆ ಗಲ್ಲಿಗೇರಿಸುವುದನ್ನು ವೀಕ್ಷಿಸಲು ಸೇರಿದ್ದರು. ವೇದಿಕೆಯ ಮುಖ್ಯಭಾಗದಲ್ಲಿ ಒಂದು ಭವ್ಯ ಆಸನದಲ್ಲಿ ರಾಜ ಮತ್ತು ರಾಣಿಯರು ಆಸೀನರಾಗಿದ್ದರು. ಅವರ ಎದುರುಗಡೆ ನ್ಯಾಯಾಧೀಶರು, ರಾಜ ಪ್ರಮುಖರು ಇತರ ಅತಿಥಿಗಳು ಆಸೀನರಾಗಿದ್ದರು. ಗಲ್ಲಿಗೇರಲಿರುವ ಸೈನಿಕನಾಗಲೇ ಏಣಿಮೇಲೆ ಹತ್ತಿ ನಿಂತಿದ್ದ. ಅವನ ಕುತ್ತಿಗೆಗೆ ನೇಣು ಹಾಕುವುದೊಂದೆ ಬಾಕಿ ಇತ್ತು. ಅವನು ದೊರೆಯನ್ನು ಅರಿಕೆ ಮಾಡಿಕೊಂಡ. ಗಲ್ಲಿಗೆ ಹಾಕುವ ಮುನ್ನ ಅಪರಾಧಿಗೆ ಅವನ ಅಂತಿಮ ಆಸೆಯನ್ನು ಪೂರೈಸಿಕೊಳ್ಳಲು ಅವಕಾಶ ಕೊಡಲಾಗುತ್ತದೆ. 'ನನಗೂ, ಸಾಯುವ ಮುನ್ನ ಒಂದು ದಂ ತಂಬಾಕಿನ ನಳಿಗೆಯನ್ನು ಸೇದಬೇಕೆಂಬ ಇಚ್ಛೆ. ಈ ಲೋಕದಲ್ಲಿ ನಾನು ಅನುಭವಿಸಬಹುದಾದ ಕೊನೆಯ ಸುಖ, ದಯವಿಟ್ಟು ಅನುಮತಿ ಕೊಡಿ' ಎನ್ನುತ್ತಾನೆ. ದೊರೆ ಇಲ್ಲ ಎನ್ನಲಾರದೆ ಒಪ್ಪಿಗೆ ಕೊಡುತ್ತಾನೆ. ಆಗ ಸೈನಿಕ ತನ್ನ ಮೂರೂ ಮಾಂತ್ರಿಕ ಪೆಟ್ಟಿಗೆಗಳಿಗೆ ಕಡ್ಡಿ ಗೀರುತ್ತಾನೆ. ಮೂರು ಪೆಟ್ಟಿಗೆಗಳಿಗೆ ಕಡ್ಡಿಗೀರುತ್ತಿದ್ದಂತೆ, ಮೂರೂ ಪೆಟ್ಟಿಗೆಯಿಂದ ಮೂರು ನಾಯಿಗಳು ಬಂದು ನಿಂತವು. ಒಂದರ ಕಣ್ಣು ಬಾಣಲೆಯಷ್ಟು ದೊಡ್ಡದಿದ್ದರೆ, ಒಂದರ ಕಣ್ಣು ಫುಟ್‌ಬಾಲ್‌ನಷ್ಟು ದೊಡ್ಡದು, ಮತ್ತೊಂದರ ಕಣ್ಣು ಕೋಪನ್ ಹೇಗನ್ ನಗರದ ಟವರ್‌ನಷ್ಟು ದೊಡ್ಡದು.

**ಸೈನಿಕನಿಗೆ ಗೊತ್ತಾಯಿತು, ತನ್ನಲ್ಲಿ ಎಂತಹ ಮಾಂತ್ರಿಕ ಪೆಟ್ಟಿಗೆಗಳಿವೆ ಎಂದು. ಒಂದು ಸಾರೆ ತಟ್ಟಿದರೆ ತಾಮ್ರದ ನಾಣ್ಯದ ಪೆಟ್ಟಿಗೆ ತೆರೆದುಕೊಳ್ಳುತ್ತದೆ ಎರಡು ಸಾರಿ ತಟ್ಟಿದರೆ ಬೆಳ್ಳಿಯ ನಾಣ್ಯದ ಪೆಟ್ಟಿಗೆ ತೆರೆದುಕೊಳ್ಳುತ್ತದೆ. ಮೂರು ಬಾರಿ ತಟ್ಟಿದರೆ ಬಂಗಾರದ ನಾಣ್ಯ ತಂದುಕೊಡುವ ಪೆಟ್ಟಿಗೆ ತೆರೆಯುತ್ತದೆ...**

ಸೈನಿಕ ಆ ನಾಯಿಗಳನ್ನು ಉದ್ದೇಶಿಸಿ ಹೇಳಿದ: 'ನನ್ನನ್ನು ಇವರಿಂದ ರಕ್ಷಿಸಿ, ಇವರು ನನ್ನನ್ನು ಉರುಳು ಹಾಕಿ ಸಾಯಿಸಬೇಕೆಂದಿದ್ದಾರೆ' ಎನ್ನುತ್ತಾನೆ. ತಕ್ಷಣವೇ ನ್ಯಾಯಾಧೀಶರನ್ನು, ಅಧಿಕಾರಿಗಳನ್ನು, ಅವರ ಕಾಲುಗಳನ್ನು ಅವರ ಕೈಗಳನ್ನು ಅವರ ತಲೆಗಳನ್ನು ಅವರ ಸಿಕ್ಕ ಸಿಕ್ಕ ಅಂಗಗಳನ್ನು ಬಾಯಿಯಲ್ಲಿ ಕಚ್ಚಿ ಹಿಡಿದು ಎತ್ತಿ ಎತ್ತಿ ಆಕಾಶಕ್ಕೆ ಬಿಸಾಡಿದವು. ಅವರುಗಳ